ಮುಖ್ಯಪ್ರಾಣ ಎನ್ನ ಮೂಲ ಗುರುವೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 458.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 24.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 279.
4. **Note:** Lyrics in all the above references are same except one word as in Ref. 1, which is given in grey highlights.
5. **Note:** Singer has followed these lyrics.

ರಾಗ: ಕಾಂಭೋಜಿ ತಾಳ: ಝಂಪೆ

ಮುಖ್ಯಪ್ರಾಣ ಎನ್ನ ಮೂಲ ಗುರುವೆ || ಪ ||
ರಕ್ಕಸಾಂತಕ ಶ್ರೀ ರಾಮನ ನಿಜದಾಸ || ಅಪ ||

ತಂದೆ ನೀನೆ ಎನಗೆ ತಾಯಿ ನೀನೇ ಎನಗೆ
ಬಂಧು ನೀನೇ ಎನಗೆ ಬಳಗ ನೀನೇ
ಎಂದೆಂದಿಗು ನಮ್ಮೊಲರ ರಕ್ಷಿಪನು ನೀನೇ || 1 ||

ತಾತ ನೀನೇ ಎನಗೆ ಕರ್ತ ನೀನೇ ಎನಗೆ
ವಿತ್ತ ನೀನೇ ಎನಗೆ ವಿಭವ ನೀನೇ
ಸತ್ಯ ನೀನೇ ಎನಗೆ ಸದಾಚಾರವು ನೀನೇ || 2 ||

ಸುಖವು ನೀನೇ ಎನಗೆ ಸುಲಭ ನೀನೇ ಎನಗೆ
ಶ್ರೀಕಾಂತ ಶ್ರೀ ಪುರಂದರ ವಿಠಲನ
ಏಕಾಂತ ಭಕುತ (ನಿಜವು) (ನಿಜ ದಾಸ) ನೀನೇ || 3 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಶ್ರೀ ವಾಯುದೇವರ ಸ್ತೋತ್ರ ಮತ್ತು ಮಹಾತ್ಮ್ಯ ವರ್ಣನೆಗಳು ಈ ಕೀರ್ತನೆಯಿಂದ ಮೊದಲಾಗುವವು. ಹನುಮ-ಭೀಮ-ಮಧ್ವ ಇವು ವಾಯುದೇವರ ಮೂರು ಅವತಾರಗಳು. ಈ ಅವತಾರದ ಕ್ರಮದಲ್ಲಿಯೇ ಇಲ್ಲಿನ ಕೀರ್ತನೆಗಳನ್ನು ಸಂಕಲಿಸಲಾಗಿದೆ.

ಮೂಲಗುರು – ತಮ್ಮ ದೀಕ್ಷಾ ಗುರುಗಳಾದ ವ್ಯಾಸರಾಯ ಸ್ವಾಮಿಗಳ ಗುರು ಪರಂಪರೆಗೆ ಮೂಲರಾದವರು, ಮಧ್ವಾಚಾರ್ಯರು.

ರಕ್ಕಸಾಂತಕ – ರಾವಣನನ್ನು ಸಂಹರಿಸಿದ.

ತಂದೆ ನೀನೆ... – 'ಗುರುರ್ಮಾತಾ ಗುರುಃ ಪಿತಾ ಗುರುರೇವ ಸ್ವಬಾಂಧವಾಃ' ಎನ್ನುವುದರ ಛಾಯೆ.

ಕರ್ತ – ನನ್ನಿಂದ ಕೆಲಸ ಮಾಡಿಸುವ ಪ್ರೇರಕ' ನನ್ನೊಳಗಿದ್ದು ಕೆಲಸವನ್ನು ಮಾಡಿಸುವ ತತ್ತ್ವಾಭಿಮಾನಿ.

ವಿತ್ತ – ಹಣ, ಸಂಪತ್ತು.

ಏಕಾಂತ ಶ್ರೀ ಪುರಂದರ ವಿಠಲನ ಭಕುತ – ಶ್ರೀ ಪುರಂದರ ವಿಠಲನ ಏಕಾಂತ ಭಕ್ತ ಎಂದು ಅನ್ವಯ. ಮೊದಲ ಎರಡು ಕಕ್ಷೆಗಳಲ್ಲಿ ನಿತ್ಯರಾದ, ಮುಕ್ತರಾದ ಲಕ್ಷ್ಮೀ ನಾರಾಯಣರಿದ್ದು, ಮೂರನೆಯ ಕಕ್ಷೆಯಲ್ಲೇ ವಾಯುವು ಜೀವೋತ್ತಮನಾಗಿ ಇರುವುದರಿಂದ ಅವರೊಂದಿಗೆ ನೇರವಾದ ನೆಂಟುಳ್ಳವನು, ಉಳಿದೆಲ್ಲ ದೇವತೆಗಳೂ ಜೀವರೂ ವಾಯುವಿನ ಮೂಲಕವೇ ವಿಷ್ಣು ಪ್ರಸಾದವನ್ನು ಗಳಿಸಿಕೊಳ್ಳುವರು.

Classification: Keerthane
Ankita: sri purandara vittala
Location: NA
Category: Hanuma Stuti, Pooja Tatva
Sub-Category: hanuma, rama, tande, tayi, bandhu, satya, madhva, madhwacharya, hanuma-bhima-madhva,
Pravachana: NA
Explanation: NA